Spl.C.90/2017
PW-1/CW-1

ದಿನಾಂಕಃ- 18.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರವಾಗಿ ಶ್ರೀ. ಎಂ ಬಿ ಆರ್ ವಕೀಲರಿಂದಃ-

1. 2023 ನೇ ಇಸವಿ ಗಣಪತಿ ಹಬ್ಬದವರೆಗೆ ನನ್ನ ತಂದೆ ಕುಟುಂಬದ ವ್ಯವಹಾರ ನೋಡಿಕೊಳ್ಳುತ್ತಿದ್ದರು. 2023 ನೇ ಇಸವಿ ಗಣಪತಿ ಹಬ್ಬದ ನಂತರ ಕುಟುಂಬದ ವ್ಯವಹಾರವನ್ನು ನಾನು ನೋಡಿಕೊಳ್ಳುತ್ತಿದ್ದೇನೆ. ಈಗ ನನ್ನ ತಂದೆಗೆ 75 ವರುಷ ವಯಸ್ಸು ಆಗಿದೆ. ಕಳೆದ 2 ವರುಷಗಳಿಂದ ನನ್ನ ತಂದೆಗೆ ಸರಿಯಾಗಿ ಕಣ್ಣುಗಳು ಕಾಣಿಸುವುದಿಲ್ಲ. ನನ್ನ ತಂದೆ ವಿದ್ಯಾಭ್ಯಾಸ ಮಾಡಿಲ್ಲ. ನನ್ನ ತಂದೆ ಕೇವಲ ಹೆಬ್ಬೆಟ್ಟಿನ ಗುರುತನ್ನು ಮಾಡುತ್ತಾರೆ.

2. ನನ್ನ ತಂದೆ ನನ್ನನ್ನು ಇವತ್ತಿಗೆ 2 ವರುಷಗಳ ಹಿಂದೆ ಯಾವುದೇ ಸರ್ಕಾರಿ ಕಛೇರಿಗಳಿಗೆ ಯಾವುದೇ ಕೆಲಸಕ್ಕಾಗಿ ಕಳುಹಿಸುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ನಾನು ವಿದ್ಯಾಭ್ಯಾಸ ಮಾಡಿಲ್ಲ. ನಾನು ಕೇವಲ ಸಹಿ ಮಾಡುವುದನ್ನು ಕಲಿತಿದ್ದೇನೆ.

3. ನನ್ನ ಕುಟುಂಬದ ಜಮೀನು ಮತ್ತು ಚಾಸಾ-4 ನೇ ಜಿ.ಪಿ.ಲೋಕೇಶ ರವರ ಮಾಲೀಕತ್ವದ ಜಮೀನುಗಳು ಅಕ್ಕಪಕ್ಕದಲ್ಲಿ ಇವೆ. ಜಿ.ಪಿ.ಲೋಕೇಶ ವಿದ್ಯಾಭ್ಯಾಸ ಮಾಡಿಲ್ಲ. ಜಿ.ಪಿ.ಲೋಕೇಶ ತನ್ನ ಕುಟುಂಬದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದಾನೆ. ಜಿ.ಪಿ.ಲೋಕೇಶ ಎಳನೀರು ವ್ಯಾಪಾರ ಮಾಡುತ್ತಾನೆ.

4. ನಮ್ಮ ಊರಿನಲ್ಲಿ ಜಿ.ಬಿ.ಲೋಕೇಶ ಮತ್ತು ವೆಂಕಟೇಶ ವಿದ್ಯುತ್ಚಕ್ತಿ ಇಲಾಖೆಯಲ್ಲಿ ಲೈನ್ ಮನ್ ಕೆಲಸ ಮಾಡುತ್ತಿಲ್ಲ. 2015 ರಲ್ಲಿ ವಸಂತ ಎನ್ನುವವರು ನಮ್ಮ ಊರಿನಲ್ಲಿ ವಿದ್ಯುತ್ಚಕ್ತಿ ಇಲಾಖೆಯಲ್ಲಿ ಲೈನ್ ಮನ್ ಕೆಲಸ ಮಾಡಿದ್ದಾರೆ.

5. ನನಗೆ ನಮ್ಮ ಊರಿನ ಗ್ರಾಮ ಪಂಚಾಯತಿ ಸದಸ್ಯರಾಗಿದ್ದರು ಎನ್ನುವ ಮೂಗೇಗೌಡರ ಮಗ ಮಹೇಶ ಎನ್ನುವವರ ಪರಿಚಯ ಇಲ್ಲ ಮತ್ತು ಗೊತ್ತಿಲ್ಲ. ನನಗೆ ಮೇಲೆ ಹೇಳಿದ ಮಹೇಶನ ತಂದೆ ಮೂಗೇಗೌಡರ ಬಗ್ಗೆ ಗೊತ್ತಿದೆ. ಮೂಗೇಗೌಡರು ತನ್ನ ಹೊಸಮನೆಗೆ ಅನಧಿಕೃತವಾಗಿ ವಿದ್ಯುತ್ಚಕ್ತಿ ಸಂಪರ್ಕ ಪಡೆದಿದ್ದರು ಎನ್ನುವುದು ಹಾಗೂ ಆ ಬಗ್ಗೆ ಪೊಲೀಸರು ದಾಳಿ ಮಾಡಿ/ತನಿಖೆ ಮಾಡಿ 25,000/- ರೂಗಳ ದಂಡ ಹಾಕಿದ್ದರು ಎನ್ನುವುದು ನನಗೆ ಗೊತ್ತಿಲ್ಲ.

6. 2014 ರಲ್ಲಿ ಆರೋಪಿ in-charge J.E. ಕೆಲಸ ಮಾಡಿದ್ದಾರೆ. ನಾನು ಸುಮಾರು 2014 ರಲ್ಲಿ ಮೊದಲ ಬಾರಿಗೆ ಆರೋಪಿಯನ್ನು ಮದ್ದೂರು KEB ಕಛೇರಿಯಲ್ಲಿ ನೋಡಿದ್ದೇನೆ. ನಾನು 2014 ರಲ್ಲಿ transformer ಕೇಳಲು ಮದ್ದೂರು KEB ಕಛೇರಿಗೆ ಹೋಗಿದ್ದೆನು. ನಾನು ಮದ್ದೂರು KEB ಕಛೇರಿಗೆ ಖುದ್ದಾಗಿ ಹೋಗುವ ಮುಂಚೆ transformer ಪೂರೈಸುವಂತೆ ಕೇಳಿ ಅರ್ಜಿ ಕೊಟ್ಟಿದ್ದೆನು. ನಾನು transformer ಗಾಗಿ ಅರ್ಜಿಯನ್ನು ಬಸವಣ್ಣ ಎನ್ನುವ J.E. ರವರಿಗೆ ಕೊಟ್ಟಿದ್ದೆನು. ನಾನು ಬಸವಣ್ಣ ರವರ ಕೈಗೆ ಕೊಟ್ಟಿದ್ದ ಅರ್ಜಿಯ ಪ್ರತಿಯನ್ನು ಲೋಕಾಯುಕ್ತ ಪೊಲೀಸರಿಗೆ ಕೊಟ್ಟಿಲ್ಲ. ನಾನು ಬಸವಣ್ಣ ರವರ ಕೈಗೆ ಕೊಟ್ಟಿದ್ದ ಅರ್ಜಿಯ ಪ್ರತಿ ಈಗ ನನ್ನ ಹತ್ತಿರ ಇಲ್ಲ. ನನ್ನಿಂದ ಅರ್ಜಿ ಸ್ವೀಕರಿಸಿದ ಬಸವಣ್ಣ ರವರು ಆಗುತ್ತದೆ ಮುಂದೆ ಮಾಡಿಕೊಡುತ್ತೇನೆ ಎಂದು ಹೇಳಿದರು.

7. ನಾನು ಬಸವಣ್ಣ ರವರ ಕೈಗೆ ಅರ್ಜಿ ಕೊಟ್ಟಾಗ ಆರೋಪಿಯನ್ನು ನೋಡಿರಲಿಲ್ಲ ಮತ್ತು ಆರೋಪಿ ಏನು ಕೆಲಸ ಮಾಡುತ್ತಿದ್ದರು ಎನ್ನುವುದು ನನಗೆ ಗೊತ್ತಿರಲಿಲ್ಲ. ನಾನು 2014 ರಲ್ಲಿ ಮತ್ತೊಮ್ಮೆ ಮದ್ದೂರು JE ಕಛೇರಿಗೆ ಹೋದಾಗ ಬಸವಣ್ಣ ನವರು JE ಹುದ್ದೆಯಿಂದ ವರ್ಗವಾಗಿದ್ದಾರೆ ಆ ಹುದ್ದೆಯಲ್ಲಿ in-charge J.E. ಆಗಿ ಆರೋಪಿ ಗೋವಿಂದರಾಜು ಕೆಲಸ ನಿರ್ವಹಿಸುತ್ತಿದ್ದಾರೆ, ಆದ್ದರಿಂದ ಗೋವಿಂದರಾಜು ರವರನ್ನು ಭೇಟಿಯಾಗುಂತೆ ಒಬ್ಬರು ನನಗೆ ತಿಳಿಸಿದರು. ಖಚಿತವಾಗಿ ಯಾವ ದಿನಾಂಕದಿಂದ ಅಥವಾ ಯಾವ ಇಸವಿಯಿಂದ ಗೋವಿಂದರಾಜು ರವರು ಮದ್ದೂರಿನಲ್ಲಿ in-charge J.E. ಯಾಗಿ ಕೆಲಸ ಮಾಡಲು ಪ್ರಾರಂಬಿಸಿದರು ಎನ್ನುವುದು ನನಗೆ ಗೊತ್ತಿಲ್ಲ.

8. 15.10.2015 ರಿಂದ ಆರೋಪಿ ಮದ್ದೂರು CHESCOM ಕಛೇರಿಯಲ್ಲಿ in-charge J.E. ಕೆಲಸ ಮಾಡಲು ಪ್ರಾರಂಬಿಸಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

9. ನನ್ನ ತಂದೆಯ ಹೆಸರಿನಲ್ಲಿ ಒಂದು ಪಂಪು ಸೆಟ್ ಇದೆ. ರತ್ನಮ್ಮ ಕೋಂ ಚನ್ನೇಗೌಡ ಮತ್ತು ಜಿ. ಬಿ. ಲೋಕೇಶನ ತಂದೆ ಪುಟ್ಟಸ್ವಾಮಿ ರವರುಗಳ ಹೆಸರಿನಲ್ಲಿ ಪಂಪು ಸೆಟ್ ಗಳು ಇವೆ.

10. ನಾನಾಗಲೀ, ರತ್ನಮ್ಮ ಕೋಂ ಚನ್ನೇಗೌಡ ಆಗಲೀ ಜಿ.ಬಿ.ಲೋಕೇಶ ಆಗಲೀ ಪಂಪು ಸೆಟ್ ಗಳಿಗೆ ಅಕ್ರಮವಾಗಿ ವಿದ್ಯುತ್ ಚಕ್ತಿ ಸಂಪರ್ಕ ಕೊಟ್ಟು ಪಂಪು ಸೆಟ್ ಗಳನ್ನು ಓಡಿಸಿಲ್ಲ.

11. 2014 ರಲ್ಲಿ ನಾನು 14,200/- ರೂಗಳನ್ನು ಮದ್ದೂರು CHESCOM ಕಛೇರಿಗೆ ಪಂಪು ಸೆಟ್ ಬಗ್ಗೆ ಪಾವತಿ ಮಾಡಿದ್ದೇನೆ.

12. 2014 ರಲ್ಲಿ ರತ್ನಮ್ಮ ಕೋಂ ಚನ್ನೇಗೌಡ ಮತ್ತು ಜಿ .ಬಿ.ಲೋಕೇಶನ ತಂದೆ ಪುಟ್ಟಸ್ವಾಮಿ ತಲಾ 14,200/- ರೂಗಳನ್ನು ಮದ್ದೂರು CHESCOM ಕಛೇರಿಗೆ ಪಂಪು ಸೆಟ್ ಬಗ್ಗೆ ಪಾವತಿ ಮಾಡಿದ್ದಾರೆ.

13. ನಾನು, ರತ್ನಮ್ಮ ಕೋಂ ಚನ್ನೇಗೌಡ ಮತ್ತು ಜಿ.ಬಿ. ಲೋಕೇಶನ ತಂದೆ ಪುಟ್ಟಸ್ವಾಮಿ ರವರುಗಳು ತಲಾ 14,200/- ರೂಗಳನ್ನು ಮದ್ದೂರು CHESCOM ಕಛೇರಿಗೆ ಪಂಪು ಸೆಟ್ ಬಗ್ಗೆ ಪಾವತಿ ಮಾಡಿದಾಗ ಬಸವಣ್ಣ ನವರು JE ಕೆಲಸ ಮಾಡುತ್ತಿದ್ದರು.

14. 2014 ರಲ್ಲಿ Transformer ಪಡೆಯಲು ಅಥವಾ ಪಂಪು ಸೆಟ್ಟು ಗಳಿಗೆ ವಿಧ್ಯುತ್ ಸಂಪರ್ಕ ಪಡೆಯಲು 14,200/- ರೂಗಳನ್ನು ಪಾವತಿ ಮಾಡುವಂತೆ ನನಗೆ CHESCOM ಕಛೇರಿಯವರು ನೋಟೀಸು ಅಥವಾ ಚೀಟಿ ಕೊಟ್ಟಿಲ್ಲ. ನಾನು ಮತ್ತು ನನ್ನ ತಂದೆ ಒಟ್ಟಿಗೆ ಮದ್ದೂರು CHESCOM ಕಛೇರಿಗೆ ಹೋಗಿದ್ದೆವು. ನಾನು ಕಛೇರಿಯ ಒಳಗೆ ಹೋಗಿ 14,200/- ರೂಗಳನ್ನು ಪಾವತಿ ಮಾಡಿದ್ದೇನೆ. ಸದರಿ 14,200/- ರೂಗಳಲ್ಲಿ ಯಾವ ಯಾವ ಬಾಬತ್ತಿಗೆ ಎಷ್ಟು ಹಣ ಎಂದು ಬಿಲ್ಲಿನಲ್ಲಿ ಬರೆಯಲಿಲ್ಲ ಅಥವಾ ನನಗೆ ಹೇಳಲಿಲ್ಲ.

15. ನಾನು, ರತ್ನಮ್ಮ ಕೋಂ ಚನ್ನೇಗೌಡ ಮತ್ತು ಜಿ.ಬಿ.ಲೋಕೇಶನ ತಂದೆ ಪುಟ್ಟಸ್ವಾಮಿ ದಂಡದ ಬಾಬ್ತು ತಲಾ 10,000/- ರೂಗಳನ್ನು ಮದ್ದೂರು CHESCOM ಕಛೇರಿಂಲ್ಲಿ ಪಾವತಿ ಮಾಡಿದ್ದೇವೆ ಎನ್ನುವುದು ಸರಿಯಲ್ಲ. ನಾನು 2014 ರಲ್ಲಿ 14,200/- ರೂಗಳನ್ನು CHESCOM ಕಛೇರಿಯಲ್ಲಿ ಪಾವತಿ ಮಾಡಿದಾಗ ಬಸವಣ್ಣ ರವರು JE ಕೆಲಸ ಮಾಡುತ್ತಿದ್ದರು. ಆ ಸಮಯದಲ್ಲಿ ಆರೋಪಿ ಗೋವಿಂದರಾಜು ಎಲ್ಲಿ ಇದ್ದರು ಮತ್ತು ಏನು ಕೆಲಸ ಮಾಡುತ್ತಿದ್ದರು ಎನ್ನುವುದು ನನಗೆ ಗೊತ್ತಿಲ್ಲ.

16. ನಾನು, ರತ್ನಮ್ಮ ಕೋಂ ಚನ್ನೇಗೌಡ ಮತ್ತು ಜಿ.ಬಿ.ಲೋಕೇಶನ ತಂದೆ ಪುಟ್ಟಸ್ವಾಮಿ transformer ಗಾಗಿ ತಲಾ 14,200/- ರೂಗಳನ್ನು CHESCOM

ಕಛೇರಿಯಲ್ಲಿ ಪಾವತಿ ಮಾಡಿದ್ದೇವೆ. ನಾನು, ರತ್ನಮ್ಮ ಕೋಂ ಚನ್ನೇಗೌಡ ಮತ್ತು ಜಿ.ಬಿ.ಲೋಕೇಶನ ತಂದೆ ಪುಟ್ಟಸ್ವಾಮಿ ತಲಾ 14,200/– ರೂಗಳನ್ನು CHESCOM ಕಛೇರಿಯಲ್ಲಿ ಪಾವತಿ ಮಾಡುವ ಮೊದಲು ಪಂಪು ಸೆಟ್ ಉಪಯೋಗಿಸಿದ್ದಕ್ಕಾಗಿ ಹಣವನ್ನು CHESCOM ಕಛೇರಿಗೆ ಪಾವತಿ ಮಾಡಿಲ್ಲ. ಮದ್ದೂರು CHESCOM ಕಛೇರಿಯಲ್ಲಿ 14,200/– ರೂಗಳನ್ನು ಪಾವತಿ ಮಾಡುವ 6 ತಿಂಗಳ ಮುಂಚೆ ಜಮೀನಿನಲ್ಲಿ ನಾನು ಕೊಳವೆ ಬಾವಿ ತೋಡಿಸಿದ್ದೇನೆ.

17. 2014 ರಲ್ಲಿ ಜಮೀನಿನಲ್ಲಿ ಕೊಳವೆ ಬಾವಿ ತೋಡಿಸಿದ ನಂತರ ಅಥವಾ ಕೂಡಲೇ ಪಂಪು ಸೆಟ್ ಖರೀದಿ ಮಾಡಿಲ್ಲ ಮತ್ತು ಪಂಪು ಸೆಟ್ ಕೊಠಡಿ ಕಟ್ಟಿಸಲಿಲ್ಲ. ನನ್ನ ಮನೆಯಿಂದ ಸುಮಾರು 3 ಕಿಮಿ ದೂರದಲ್ಲಿ ಇರುವ ಗದ್ದೆಯಲ್ಲಿ ಕೊಳವೆ ಬಾವಿ ತೋಡಿಸಿದ್ದೇನೆ. ನಾನು ಕೊಳವೆ ಬಾವಿ ತೋಡಿಸಿದ ಸಮಯದಲ್ಲಿ ಕೊಳವೆ ಬಾವಿ ತೋಡಿಸಿದ ಸ್ಥಳದ ಹತ್ತಿರದಲ್ಲಿ CHESCOM ಲೈನು ಇರಲಿಲ್ಲ. ಆ ಸಮಯದಲ್ಲಿ CHESCOM ಕಂಬಗಳನ್ನು ನೆಟ್ಟು CHESCOM ತಂತಿಗಳನ್ನು ಅಳವಡಿಸಿ ವಿದ್ಯುತ್ ಸಂಪರ್ಕವನ್ನು ಕೊಳವೆ ಬಾವಿಗೆ ಕೊಡುವಂತೆ ಅರ್ಜಿಗಳನ್ನು ಮದ್ದೂರು CHESCOM ಕಛೇರಿಗೆ ಕೊಟ್ಟಿಲ್ಲ.

18. ನಾನು ಲೋಕಾಯುಕ್ತ ಪೊಲೀಸರಿಗೆ ದೂರು ಕೊಟ್ಟಾಗ 2014 ರಲ್ಲಿ ಮದ್ದೂರು CHESCOM ಕಛೇರಿಗೆ 14,200/– ರೂಗಳನ್ನು ಪಾವತಿ ಮಾಡಿದ್ದರ ಕುರಿತು ಕಛೇರಿಯವರು ಕೊಟ್ಟಿದ್ದ ಬಿಲ್ಲನ್ನು ಲೋಕಾಯುಕ್ತ ಪೊಲೀಸರಿಗೆ ಕೊಟ್ಟಿದ್ದೇನೆ. ಈ ಸಾಕ್ಷಿ ಪ್ರಥಮ ವರ್ತಮಾನ ವರದಿಯಲ್ಲಿ ತನ್ನ ಸಹಿ ಇರುವುದನ್ನು ಗುರುತಿಸಿದ್ದಾರೆ. ಈ ಸಾಕ್ಷಿ ಪ್ರಥಮ ವರ್ತಮಾನ ವರದಿಯ ಜೊತೆಯಲ್ಲಿ ಇರುವ 10 ಅಡಕಗಳಲ್ಲಿ ಅನುಕ್ರಮ 1 ರಲ್ಲಿ ಇರುವ RTC ಸರ್ವೇ ನಂಬರು 119/3 ಪಿ3 ಜಮೀನು ತನ್ನ ತಂದೆ ಬೋರೇಗೌಡ ಬಿನ್ ರಂಗಿಕರೀಗೌಡ ಮಾದೇಗೌಡ ರವರ ಹೆಸರಿನಲ್ಲಿ ಇದೆ ಎಂದೂ, ಅನುಕ್ರಮ 3 ರಲ್ಲಿ ಇರುವ 01.09.2014 ನೇ ದಿನಾಂಕದ ರೂ 10,000/– ಬೆಲೆಯ CHESCOM ರಶೀದಿ ತನ್ನ ತಂದೆ ಬೋರೇಗೌಡ ರವರ ಹೆಸರಿನಲ್ಲಿ ಇದೆ ಎಂದೂ, ಅನುಕ್ರಮ 6 ರಲ್ಲಿ ಇರುವ ಪಡಿತರ ಚೀಟಿಯಲ್ಲಿ ತನ್ನ ಫೋಟೋ ಮತ್ತು ತನ್ನ ತಂದೆ ತಾಯಿಯರ ಫೋಟೋ ಕಾಣಿಸುತ್ತಿದೆ ಎಂದೂ ಅನುಕ್ರಮ 9 ರಲ್ಲಿ ಇರುವ ದಾಖಲೆಯಲ್ಲಿ 14,200/- (3 ತಿಂಗಳ ಕನಿಷ್ಟ ಠೇವಣಿ (ARF) 50/- ರೂ, ಮಾಪಕ ಭದ್ರತಾ ಠೇವಣಿ (IST) 4,150/- ಅಂದಾಜು ವೆಚ್ಚ (penalty) ರೂ 10,000/- ಎಂದು ಬರೆದಿದೆ ಎಂದು ಹೇಳಿದ್ದಾರೆ. ಈ ಸಾಕ್ಷಿಯ ಸಹಿ

ಇರುವ ಪ್ರಥಮ ವರ್ತಮಾನ ವರದಿಯನ್ನು ನಿಪಿ.35 ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು ನಿಪಿ. 35(ಎ) ಎಂದು ಗುರುತಿಸಲಾಯಿತು.

19. (ಈ ಹಂತದಲ್ಲಿ ವಿಶೇಷ ಪಿಪಿ ರವರು ಆರೋಪಿಯನ್ನು ವಿಚಾರಿಸಿ ರಶ್ಮಿ ರಾಜು ಎನ್ನುವವರು 01.09.2014/31.03.2015 ರಂದು ಮದ್ದೂರು ಉಪ ವಿಭಾಗದ CHESCOM MDR-1 ಕಛೇರಿಯಲ್ಲಿ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಕೆಲಸ ಮಾಡಿದ್ದಾರೆ ಎಂದು ಹೇಳಿದ್ದಾರೆ).

ಈ ಹಂತದಲ್ಲಿ ಮಧ್ಯಾಹ್ನ 2.00 ಗಂಟೆಯಾಗಿದ್ದರಿಂದ ಎಂ ಬಿ ಆರ್ ವಕೀಲರ ವಿನಂತಿಯ ಮೇರೆಗೆ ಮತ್ತು ಸಾಕ್ಷಿಯ ಒಪ್ಪಿಗೆ ಮೇರೆಗೆ ಮುಂದುವರೆದ ಪಾಟೀಸವಾಲನ್ನು 30.10.2025 ಗುರುವಾರಕ್ಕೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜೆ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.